ಅಭಿಪ್ರಾಯ ಹಾಗೂ ಸಾರ್ವಜನಿಕ ಅಭಿಪ್ರಾಯಕ್ಕೆ definitely ಸರ್ಕಾರ ಸ್ಪಂದಿಸುತ್ತದೆ.

ಶ್ರೀ ಸಿದ್ದರಾಮಯ್ಯ : ಸಾರ್ವಜನಿಕರ ಅಭಿಪ್ರಾಯ ನಮ್ಮ ವಿರುದ್ಧ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಸಾರ್ವಜನಿಕ ಅಭಿಪ್ರಾಯ ಏನಿದೆ. ಲೋಕಾಯುಕ್ತ ನೇಮಕ ಆದಷ್ಟು ಬೇಗನೆ ಆಗಬೇಕೆಂದಿದೆ. ನೀವೂ ಸಹ ಆ ಅಭಿಪ್ರಾಯಕ್ಕೆ ತಕ್ಕಂತೆ insist ಮಾಡುತ್ತಿದ್ದೀರಿ. ಅದನ್ನು ನಾವು ಒಪ್ಪುತ್ತಿದ್ದೇನೆ. ಅದಕ್ಕೆ ಕೋರ್ಟ್‌ನಲ್ಲಿ ಪ್ರಕರಣಗಳಿವೆ. ಈ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡು ನಾಳೆ ಏನು ನಡೆಯುತ್ತದೆ ಅದರ ಮೇಲೆ ನಾವು ಮುಂದಿನ Process definitely ಮಾಡುತ್ತೇವೆ.

ಅಧ್ಯಕ್ಷರು : ಈಗ ಚಿಕ್ಕಣ್ಣನವರು ಹಕ್ಕುಚ್ಯುತಿ ಬಗ್ಗೆ ಮಾತನಾಡಿ.

12. ವಿಷಯ : ಮಾನ್ಯ ಸದಸ್ಯರಾದ ಶ್ರೀ ಚಿಕ್ಕಣ್ಣನವರು ಹಕ್ಕುಚ್ಯುತಿಯಾಗಿರುವ ಬಗ್ಗೆ.

ಶ್ರೀ ಚಿಕ್ಕಣ್ಣ (ಹೆಗ್ಗಡದೇವನ ಕೋಟೆ) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಹಕ್ಕುಚ್ಯುತಿ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈಗಾಗಲೇ 27ನೇ ತಾರೀಖು ಪತ್ರಿಕೆಯಲ್ಲಿ ಪ್ರಕಟಣೆಯಾಗಿದೆ. ದಿನಾಂಕ 21 ರಂದು ಎಲ್ಲಾ ಟಿವಿ ಚಾನೆಲ್, ಮಾಧ್ಯಮಗಳಲ್ಲಿ ಬಿತ್ತರಿಸಿದ್ದಾರೆ. ನಾನು ದಿನಾಂಕ 21-7-2012 ರಂದು ಶನಿವಾರ Divisional Urban Development Cell ಕಚೇರಿಗೆ ಹೋಗಿದ್ದೆ 18, 19, 20ನೇ ತಾರೀಖುಗಳಂದು ನಾನು ಮಾಡಿದಂಥ ಕರೆಯನ್ನು ತಾವು ಏಕೆ ಸ್ವೀಕರಿಸಿಲಿಲ್ಲ. ತಾವು ಏಕೆ ಮಾತನಾಡಲಿಲ್ಲವೆಂದು ಕೇಳುವುದಕ್ಕೆ ಹೋದ ಸಂದರ್ಭದಲ್ಲಿ ಅವರು ನನ್ನ ಬಗ್ಗೆ ಬಹಳ ಆಪಾದನೆ ಮಾಡಿದ್ದಾರೆ. ಅದನ್ನು ಪತ್ರಿಕೆಯಲ್ಲಿ ಕೂಡ ಹೇಳಿದ್ದಾರೆ. ಏನೆಂದರೆ ಇವರು ಕುಡಿದು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ನನಗೆ ನೆಮ್ಮದಿ ಕೆಡಿಸಿದ್ದಾರೆ. ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಇವರ ಬಗ್ಗೆ ಸಾರ್ವಜನಿಕರಲ್ಲಿ ಕೂಡ ಕೆಟ್ಟ ಅಭಿಪ್ರಾಯ ಇದೆ. ಅದನ್ನು ತಾವೆಲ್ಲರೂ ಕೂಡ ಗಮನಿಸಬೇಕು. ಎಂದು

ಮಾಧ್ಯಮದ ಮುಂದೆ ಹೇಳಿದ್ದಾರೆ. ಈ ಪತ್ರಿಕೆಯಲ್ಲಿ ಕೂಡಾ ಇದೆ. "ಶಾಸಕರು ಮೂರು ನಾಲ್ಕು ದಿನಗಳು ಕುಡಿದು ದೂರವಾಣಿ ಕರೆ ಮಾಡಿ, ಮಹಿಳಾ ಅಧಿಕಾರಿ ಎಂಬುದನ್ನು ಮರೆತು ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ನನಗೆ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದು ನನಗೆ ಕೆಲಸ ಮಾಡಲಿಕ್ಕೆ ಆಗುತ್ತಿಲ್ಲ." ನಾನು ದೂರವಾಣಿ ಕರೆ ಮಾಡಿರುವುದು land line ಗೆ. Land line ನಲ್ಲಿ ಅವರ ಸಿಬ್ಬಂದಿಗೆ ಅವರಿಗೆ ಕೊಡಿ ಎಂದು ಕೇಳಿದಾಗ ಅವರಿಲ್ಲ. ಸಭೆಗೆ ಹೋಗಿದ್ದಾರೆ ಎಂದು ಮೂರು ದಿವಸ ಕೂಡ ಹೇಳಿದ್ದಾರೆ. ಇಷ್ಟು ಹೇಳಿದ ನಂತರ ನಾನು ಅವರ ಜೊತೆ ಮಾತನಾಡಿದ್ದು ಯಾವಾಗ ? ನಾನು ಕುಡಿದು ಹೋಗಿದ್ದು ಯಾವಾಗ? ಅವರು ನಾನು ಕುಡಿಯುತ್ತೇನೆಂದು ಹೇಳಿರುವುದು ಸತ್ಯ. ನಾವು ಕುಡಿಯುವುದು ರಾತ್ರಿ ಸಮಯ. ಆ ಮಹಿಳಾ ಅಧಿಕಾರಿ ಹೇಳುವುದನ್ನು ನೋಡಿದರೆ ಆ ಮಹಿಳೆ ಕುಡಿದು ಮಾತನಾಡಿರಬೇಕೆಂದು ನನ್ನ ಅನ್ನಿಸಿಕೆ. ಆ ಅಪಾದನೆ ಮಾಡಿದಂಥ ಮಹಿಳಾ ಅಧಿಕಾರಿ ನನ್ನ ಒಬ್ಬನ ಮೇಲೆ ದೂಷಣೆ ಮಾಡಿಲ್ಲ. ಈ ಮನೆಯ ಹರಿಜನ ಗಿರಿಜನ ಸದಸ್ಯರು ಹಾಗೂ ಮೇಲ್ಮನೆಯ ಹರಿಜನ ಗಿರಿಜನ ಸದಸ್ಯರೆಲ್ಲರ ಬಗ್ಗೆ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ನಾನೂ ಕೂಡ ಎಸ್.ಟಿ. ಶಾಸಕರಾಗಿ ಆಯ್ಕೆಯಾಗಿದ್ದೇನೆ. ಇದನ್ನು ತಾವು ಕೂಡ ಗಂಭೀರವಾಗಿ ಪರಿಗಣಿಸಬೇಕು. ಈಗಾಗಲೇ ನಮ್ಮ ಪಾಟೀಲರು ಪತ್ರಿಕೆಗೆ ಹೇಳಬೇಕಾದಾಗ "ನಾವು ತಪ್ಪು ಮಾಡಿದ್ದರೆ ನಮ್ಮನ್ನು ನೇಣಿಗೆ ಹಾಕಿ" ಎಂದು ಹೇಳಿದರು. ಇದರಲ್ಲಿ ಏನಾದರೂ ನಮ್ಮ ತಪ್ಪಿದ್ದರೆ ನಾನು ನೇಣಿಗೆ ಹಾಕಿ ಎಂದು ಹೇಳುವುದಿಲ್ಲ. ಕೆಂಗಲ್ ಹನುಮಂತಯ್ಯನವರು ಪತ್ರಿಮೆ ಮುಂದೆ ನನಗೆ ಗುಂಡು ಹಾಕಿ, ನಾನು ತಯಾರಿದ್ದೇನೆ. ಒಬ್ಬ ಶಾಸಕನಾಗಿ ಮೂರು ದಿವಸಗಳು ಫೋನ್ ಮೂಲಕ ಮಾತನಾಡಿ ಅವರು ಉತ್ತರ ಕೊಡದಿದ್ದರೆ ನಾನು ಎಲ್ಲಿ ಕೇಳಬೇಕು? ಏಕೆ ನನಗೆ ಸ್ಪಂದಿಸುತ್ತಿಲ್ಲವೆಂದು ಕೇಳಬೇಕೋ, ಬೇಡವೋ? ಈ ರೀತಿ ದೌರ್ಜನ್ಯ ಎಸಗಿದಂಥ ಅಧಿಕಾರಿಗೆ ಸದನದಲ್ಲಿ ತಮ್ಮ ಕಾಲದಲ್ಲಿ, ಕಾನೂನಿನಲ್ಲಿ ಕ್ರಮ ಜರುಗಿಸಬೇಕು. ಅದರ ಮೂಲಕ ಮುಂದೆ ಎಚ್ಚರಿಕೆ ಬರುವಂತೆ ಮಾಡಬೇಕು. ಆ ಮಹಿಳಾ ಅಧಿಕಾರಿ ಮಾಯಾದೇವಿ ಗಲಗಲಿ, ಕೆ.ಎ.ಎಸ್.

ಎಂದು ಬೋರ್ಡ್ ಹಾಕಿಕೊಂಡಿದ್ದಾರೆ. ಅವರು ಕೆ.ಎ.ಎಸ್. ಮಾಡಿಲ್ಲ. ಕೆ.ಜಿ.ಎಸ್. ಮಾಡಿದ್ದಾರೆ. Karnataka Administrative Service ಅಲ್ಲ. Karnataka General Service, KGS ಅನ್ನು KAS ಎಂದು ಪರಿವರ್ತನೆ ಮಾಡಿ ಸರ್ಕಾರಕ್ಕೂ ಕೂಡ ಅವರು ಮೋಸ ಮಾಡಿದ್ದಾರೆ. ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಂಡು ಕಾನೂನು ರೀತ್ಯಾ ಕ್ರಮ ಜರುಗಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಸರ್ಕಾರದಿಂದ ಏನು ಉತ್ತರ ಕೊಡುತ್ತಾರೋ ಕೇಳೋಣ.

ಡಾ॥ ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಚಿಕ್ಕಣ್ಣವರು ನಮ್ಮ ಹೆಚ್.ಡಿ. ಕೋಟೆಯ ಗೌರವ್ವಿತ ಸದಸ್ಯರು, ಅವರು ಬಹಳ ಸಜ್ಜನರಿದ್ದಾರೆ. ಅವರು ಬೇರೆಯವರ ಬಗ್ಗೆ ಧ್ವನಿಯೇರಿಸಿ ಮಾತನಾಡಿದ್ದೇ ನಮಗೆ ಗೊತ್ತಿಲ್ಲ. ಸರ್ಕಾರದಲ್ಲಿ ಕೆಲಸ ಮಾಡುವಂಥ ಅಧಿಕಾರಿಗಳು ಯಾವುದೇ ಒಬ್ಬ ಜನಪ್ರತಿನಿಧಿ ಫೋನ್ ಮಾಡಿದರೆ ಸೌಜನ್ಯದಿಂದ ಫೋನ್ ತೆಗೆದುಕೊಂಡು ಮಾತನಾಡಬೇಕು ಅಥವಾ ಅವರು ಸಭೆಗಳಲ್ಲಿ ಇದ್ದರೆ, ಮಾತನಾಡಲಿಕ್ಕೆ ಆಗದಂಥ ಪರಿಸ್ಥಿತಿ ಇದ್ದರೆ ಆ ಮಾನ್ಯ ಸದಸ್ಯರ ನಂಬರ್‌ಗಳನ್ನು ನೋಟ್ ಮಾಡಿಕೊಂಡು, ವಾಪಸ್ ಫೋನ್ ಮಾಡಿ ಅವರು ಯಾವ ವಿಷಯಕ್ಕೆ ಫೋನ್ ಮಾಡಿದಿರಿ. ಏನು ಸಮಸ್ಯೆ ಇದೆ ಎಂದು ಕೇಳಿ ಸೌಜನ್ಯಪೂರ್ವಕವಾಗಿ ನಡೆದುಕೊಳ್ಳಬೇಕಾದುದು ಅವರ ಮೂಲ ಕರ್ತವ್ಯ. ಅದರೆ ಮಾನ್ಯ ಶಾಸಕರು ಅವರ ಕ್ಷೇತ್ರದ ಸಮಸ್ಯೆಗಳ ಬಗ್ಗೆ ದೂರು ಕೊಡಲಿಕ್ಕೆ ಹೋದಾಗ ಫೋನ್‌ನಲ್ಲೇ ಇವರು ಕುಡಿದು ಮಾತನಾಡಿದರು ಎಂದು ಹೇಳುವುದು ಶಾಸಕರ ಗೌರವಕ್ಕೆ ಹಕ್ಕುಚ್ಯುತಿ ಆಗುತ್ತದೆ. ಕುಡಿದಿರುವರೋ, ಕುಡಿದಿಲ್ಲವೋ ಎಂದು ಗೊತ್ತಾಗಬೇಕಾದರೆ the particular person must be subjected to medical examination. ಆಲ್ಕೋಹಾಲ್ consume ಮಾಡದೆ, ಅದು ಗೊತ್ತೇ ಇಲ್ಲದೆ, ಪರೀಕ್ಷೆ ಮಾಡಿ ವರದಿ ಬರದೆ, ಕುಡಿದಿದ್ದಾರೆ ಎಂದು ಹೇಳುವುದೇನೆ ಅವರಿಗೆ ಅಗೌರವ ತಂದಿದ್ದು, ಮತ್ತು ಅವರ ಹಕ್ಕುಚ್ಯುತಿ ಮಾಡುವಂತಹ ಒಂದು ಘಟನೆ ಮತ್ತು ಕ್ಷೇತ್ರದ

ಶಾಸಕರು ಫೋನ್ ಮಾಡಿದಾಗ, communication network establish ಆಗಿರುವುದು for a speedly delivery ಆದಷ್ಟು ಬೇಗ ಕ್ಷೇತ್ರದ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಇರುವುದೇ Communication Network. ಸುಮಾರು 60 ಕೋಟಿ ಜನ ಭಾರತ ದೇಶದಲ್ಲಿ ಇವತ್ತು ಮೊಬೈಲ್‌ಗಳನ್ನು ಉಪಯೋಗಿಸುತ್ತಿದ್ದಾರೆ ತಲೆ ಮೇಲೆ ಕಸದ ಬುಟ್ಟಿ ಹೊತ್ತುಕೊಂಡು ತಿಪ್ಪೆಗೆ ಹೋಗುವ ಹೆಂಗಸರು ಕೂಡ ಇವತ್ತು ತಿಪ್ಪೆಗೆ ಕಸ ಸುರಿದ ನಂತರ ಮೊಬೈಲ್ ಫೋನ್‌ನಲ್ಲಿ ಮಾತನಾಡಿಕೊಂಡು ಬರುತ್ತಿರುತ್ತಾರೆ. ಇಂತಹ ಶರವೇಗದಲ್ಲಿ ಟೆಕ್ನಾಲಜಿ ಬೆಳೆದರೂ ಜಿಲ್ಲಾ ಮಟ್ಟದ ಆಡಳಿತಾಧಿಕಾರಿಗಳಾಗಿ ಒಬ್ಬ ಜನಪ್ರತಿನಿಧಿ ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಕೇಳುವುದಕ್ಕೆ ಹೋದರೆ, respond ಮಾಡದೆ ಅಗೌರವಯುತವಾಗಿ ನಡೆದುಕೊಂಡು ಅವರಿಗೆ ಅವಾಚ್ಯ ಶಬ್ದಗಳನ್ನು ಬಳಸಿ ಆ ರೀತಿ ನಡವಳಿಕೆಯಿಂದ ನಡೆದುಕೊಂಡಿರುವುದು. it speaks about very bad administration of the State Government. It will have a deleterius effect on the Government. ಈ ತರಹದ ಅಧಿಕಾರಿಗಳು ಜನ ಪ್ರತಿನಿಧಿಗಳು ಮಾತನಾಡಿದರೆ ಬೇರೆ ಬೇರೆ ರೀತಿಯಲ್ಲಿ ಘಟನೆಗಳನ್ನು ಹುಟ್ಟಿಸಿಕೊಳ್ಳುವುದು ಆಡಳಿತಕ್ಕೆ ಗಂಭೀರವಾದ ದುಷ್ಪರಿಣಾಮವನ್ನು ಬೀರತಕ್ಕಂಹದ್ದು ಆದುದರಿಂದ ಇಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಮತ್ತು ಇದರಿಂದ ಅವರ ಹಕ್ಕುಚ್ಯುತಿಯಾಗಿದೆ, ಆದುದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ವಹಿಸಬೇಕು. ಅವರನ್ನು ಅಮಾನತ್ತುಗೊಳಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಆ ಅಧಿಕಾರಿಯ ಮೇಲೆ ಏನು ಮಾತನಾಡಿಲ್ಲ. ಮೂರ್‍ನಾಲ್ಕು ದಿನ continous ಆಗಿ ಫೋನ್ ಮಾಡಿದ್ದಾರೆ, ಆಕೆ ಫೋನ್ ರಿಸೀವ್ ಮಾಡಿಲ್ಲ. ಏಕೋ ಫೋನ್ ರಿಸೀವ್ ಮಾಡುತ್ತಿಲ್ಲವೆಂದು ಇವರೇ ಅಲ್ಲಿಗೆ ಹೋಗಿದ್ದಾರೆ. ಅಲ್ಲಿ ಹೋದಾಗ MLA ಜೊತೆ ಅವರು ನಡೆದುಕೊಂಡು ರೀತಿ ಬಹಳ ಉದ್ಧಟತನದ್ದು, ಚುನಾಯಿತ ಪ್ರತಿನಿಧಿಗಳ

ಜೊತೆ ಸರ್ಕಾರಿ ಅಧಿಕಾರಿಗಳು ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಅನೇಕ Circular ಗಳನ್ನು ಹೊರಡಿಸಿದ್ದೇವೆ. ಬಹುಶಃ Circular ಗಳನ್ನು ಇವರು ನೋಡುತ್ತಾರೋ, ಇಲ್ಲವೋ ಗೊತ್ತಿಲ್ಲ ಅವರು ಎಷ್ಟೇ ಎತ್ತರದ ಅಧಿಕಾರಿಯಾದರೂ ಕೂಡ ಜನಪ್ರತಿನಿಧಿಗಳೆಂದರೆ ಜನರನ್ನು ಪ್ರತಿನಿಧಿಸಿ ಅವರ ಭಾವನೆಗಳನ್ನು ಹೇಳುವುದಕ್ಕೋಸ್ಕರ ಹೋಗುವಂತಹವರು, ಅವರು ಸ್ವಂತ ಕೆಲಸಕ್ಕೇನೂ ಹೋಗಿಲ್ಲ. ಅಲ್ಲಿ ಹೋದಾಗ ಮಾನ್ಯ ಶಾಸಕರು "ಯಾಕಮ್ಮ ನೀನು ಫೋನ್ ರಿಸೀವ್ ಮಾಡಿಲ್ಲ? ಎಂದು ಕೇಳಿದರು. ಆ ಅಧಿಕಾರಿ ಪತ್ರಿಕೆಗೆ ಹೇಳಿರುವುದನ್ನು ನೀವು ನೋಡಿರಬೇಕು. ಪತ್ರಿಕೆ ತುಣುಕುಗಳನ್ನು ನಿಮಗೆ ಕೊಟ್ಟಿದ್ದಾರೆ. ಆದರಲ್ಲಿ ಕುಡಿದು ಮಾತನಾಡುತ್ತಿದ್ದರು. ಇವರು ಭ್ರಷ್ಟರು. ಹೀಗೆಲ್ಲಾ ಮಾತನಾಡಿದರೆ ಇವರು ಸರ್ಕಾರಿ ಕೆಲಸದಲ್ಲಿದ್ದಾರಾ ಅಥವಾ ಬೇರೆ ಇನ್ನೇನಾದರೂ ಕೆಲಸದಲ್ಲಿದ್ದಾರಾ? Even ಎಷ್ಟೇ ಎತ್ತರದ ಅಧಿಕಾರಿಯಾದರೂ ಕೂಡ ಈ ರೀತಿ ಮಾತನಾಡುವುದಕ್ಕೆ ಸಾಧ್ಯವಿಲ್ಲ. 'ನೀವು ಭ್ರಷ್ಟರು' ಎಂದು ಪತ್ರಿಕೆಗಳಿಗೆಲ್ಲಾ ಹೇಳಿಕೆ ಕೊಟ್ಟಿರುವುದು, ಮೈಸೂರು ಜಿಲ್ಲಾ edition ಗಳಲ್ಲಂತೂ ದೊಡ್ಡದಾಗಿ ಪ್ರಚಾರವಾಗಿದೆ. ಮಾನ್ಯ ಅಧ್ಯಕ್ಷರೆ ಇದನ್ನು ನೋಡಿದ್ದೀರೆಂದು ತಿಳಿದುಕೊಂಡಿದ್ದೇನೆ. ನೋಡಿದ್ದೀರಾ ?

ಅಧ್ಯಕ್ಷರು : ನೋಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಶಾಸಕರು ಪಾಪ ಮಹಿಳಾ ಅಧಿಕಾರಿಯೆಂದು ಬಹಳ ತಾಳ್ಮೆಯಿಂದ ವರ್ತಿಸಿದ್ದಾರೆ. ಬಹಳ ಸೌಜನ್ಯ ಹಾಗೂ ಸಂಯಮದಿಂದ ವರ್ತಿಸಿದ್ದಾರೆ. ಅವರೇನಾದರೂ ಪುರುಷರಾಗಿದ್ದರೆ ಬೇರೆ ರೀತಿ ಆಗುತ್ತಿತ್ತು. ಅವರು ಮಾತನಾಡುವುದನ್ನೆಲ್ಲಾ ಕೇಳಿಕೊಂಡು ಸಹಿಸಿಕೊಂಡು ಬಂದಿದ್ದಾರೆ. ಇವರು ಶಾಸಕರಾಗಿ ಹೇಗೆ ಕೆಲಸ ಮಾಡುವುದು? ಅವರ ಹಕ್ಕಿಗೆ ಚ್ಯುತಿಯಾಗಿಲ್ಲವೇ ? It is a clear case of breach of privilege ಆದುದರಿಂದ ಕೂಡಲೇ ಆ ಅಧಿಕಾರಿಯನ್ನು ಆಮಾನತ್ತಿನಲ್ಲಿಡಬೇಕು. ಇದರ ಬಗ್ಗೆ ತನಿಖೆಯಾಗಬೇಕು. ಇಡೀ ಪ್ರಕರಣವನ್ನು Privilege Committee ಗೆ ವಹಿಸಬೇಕು.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಸಭಾ ಸದಸ್ಯರಾದ ಮಾನ್ಯ ಚಿಕ್ಕಣ್ಣನವರು ಮಂಡಿಸಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ಹಾಗೂ ಡಾ॥ ಹೆಚ್.ಸಿ. ಮಹದೇವಪ್ಪ ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಗಮನ ಸೆಳೆದಿರುವ ವಿಚಾರಗಳ ಬಗ್ಗೆ ಹೇಳಿರುವ ಎಲ್ಲ ಮಾತುಗಳ ಬಗ್ಗೆ ವಿವರವಾದ ವರದಿಯನ್ನು ಜಿಲ್ಲಾಧಿಕಾರಿಗಳಿಂದ ತರಿಸಿ, ತಮಗೆ ಮಾಹಿತಿಯನ್ನು ಸಲ್ಲಿಸುತ್ತೇನೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಮಾನ್ಯ ಸದಸ್ಯರು : ಈ ಸಂಬಂಧ ಕ್ರಮ ಕೈಗೊಳ್ಳಿ

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ಕ್ರಮ ಕೈಗೊಳುವುದು ಬೇರೆ. ಕ್ರಮ ಕೈಗೊಳ್ಳವುದು ಅಧ್ಯಕ್ಷರು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದು ಶಾಸಕರ ಗೌರವದ ಪ್ರಶ್ನೆ. ಅವರ ಹಕ್ಕಿನ ಪ್ರಶ್ನೆ ನೀವು ಇವರನ್ನು ರಕ್ಷಣೆ ಮಾಡಬೇಕು.

(ಗೊಂದಲ)

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಶಾಸಕರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

(ಗೊಂದಲ)

ಅಧ್ಯಕ್ಷರು : ದಯವಿಟ್ಟು ನೀವು ಹೋಗಿ, ಇನ್ನೂ ಎನೂ ತೀರ್ಮಾನವನ್ನೆ ಮಾಡಿಲ್ಲ. ನಾನೇನು ತೀರ್ಮಾನವನ್ನೇ ಕೊಟ್ಟಿಲ್ಲ. ನೀವು ಅಷ್ಟು ಬೇಗ ಸದನದ ಬಾವಿಗೆ ಬಂದರೆ ಹೇಗೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಈ ಘಟನೆ ನಡೆದು ಒಂದು ವಾರವಾಗಿದೆ.

(ಗೊಂದಲ)

ಅಧ್ಯಕ್ಷರು : ಒಂದು ವಾರ ಆಗಿಲ್ಲ. 21ನೇ ತಾರೀಖು ಆಗಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಶಾಸಕರು ಅವರ ಕ್ಷೇತ್ರದಲ್ಲಿ ಹೇಗೆ ಮುಖ ತೋರಿಸುತ್ತಾರೆಂದು ಹೇಳಿ ?

(ಗೊಂದಲ)

ಶ್ರೀ ಅಶೋಕ ಮಹದೇವಪ್ಪ ಪಟ್ಟಣ : ತಕ್ಷಣ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದು ಅವರಿಬ್ಬರ ಮಧ್ಯೆ ನಡೆದಿರುವ ಘಟನೆಯಲ್ಲ. ಮಾಧ್ಯಮದವರ ಎದುರಿಗೆ ನಡೆದಿರುವುದು. ಅವರು ಅವರ ಕ್ಷೇತ್ರಕ್ಕೆ ಹೇಗೆ ಮುಖ ತೋರಿಸಬೇಕು ಹೇಳಿ? ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸಸ್ಪೆಂಡ್ ಮಾಡಿ

(ಗೊಂದಲ)

ಅಧ್ಯಕ್ಷರು : Refer ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲಾ ತಮ್ಮ ಸೀಟಿಗೆ ಹೋಗಿ,

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮೊದಲು ಅವರನ್ನು ಸಸ್ಪೆಂಡ್ ಮಾಡಿಸಿ. ಅವರು ಎಂಥದೋ ಯೋಜನಾ ನಿರ್ದೇಶಕಿಯಾಗಿ, ಎಂ.ಎಲ್.ಎ. ಗಳು ಅವರ ಕಛೇರಿಗೆ ಹೋಗಿದ್ದಾರೆ. ಶಾಸಕರೇನು ಅವರ ಮನೆಗೆ ಏನಾದರೂ ಹೋಗಿದ್ದರಾ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಧಿಕಾರಿಗಳಿಂದ ಎಲ್ಲಾ ಕಡೆ ಇದೇ ರೀತಿಯಾಗುತ್ತಿದೆ. ಏನಾದರೂ ಕ್ರಮ ಕೈಗೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : This is too much. ಮೊದಲು ಸಸ್ಪೆಂಡ್ ಮಾಡಲಿ ನ್ಯಾಯಾಲಯಕ್ಕೆ ನಂತರ ಹೋಗಲಿ, ಅದನ್ನು ಆಮೇಲೆ ಕೂಡ ತಡೆಯುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ದಯಮಾಡಿ ಇದು ಶಾಸಕರ ಗೌರವದ ಪ್ರಶ್ನೆ ಅವರು ಅವರ ಕ್ಷೇತ್ರದಲ್ಲಿ ಹೇಗೆ ಮುಖ ತೋರಿಸುತ್ತಾರೆ ಹೇಳಿ ನೋಡೋಣ?

(ಗೊಂದಲ)

ಅಧ್ಯಕ್ಷರು : Refer ಮಾಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಒಬ್ಬ ಅಧಿಕಾರಿ ಮಾಧ್ಯಮದವರ ಮುಂದೆ ಎಲ್ಲಿಯವರೆಗೆ ಹೇಳುತ್ತಾರೆಂದರೆ ಶಾಸಕರೇ ನೀವು ಭ್ರಷ್ಟರು ಎಂದು ಹೇಳುತ್ತಾರೆ. ಕುಡಿದು ಬಂದಿದ್ದೀರಿ, ನೀವು' ಎಂದು ಹೇಳುತ್ತಾರೆ. This is too much. ಸರ್ಕಾರ ಇಂತಹವರನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ತಾವುಗಳು ಮೊದಲು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಈಗಲೇ ಸೂಚನೆಯನ್ನು ಕೊಟ್ಟು ವರದಿ ತರಿಸಿ ನಾಳೆಯೇ ಕ್ರಮ ಕೈಗೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಪ್ಲೀಸ್, ನಿಮ್ಮ ನಿಮ್ಮ ಸ್ಥಾನಗಳಿಗೆ ಹೋದರೆ ಅವರು ಏನು ಹೇಳಿಕೆ ಕೊಡುತ್ತಾರೆಂದು ತಿಳಿಯುತ್ತದೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ನೀವು ಕೊಟ್ಟಿರುವಂತಹ ಮಾಹಿತಿಗಳ ಪ್ರಕಾರ ಕ್ರಮ ಕೈಗೊಳ್ಳುವುದರಲ್ಲಿ ಎರಡು ಮಾತಿಲ್ಲ. ಅದರೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸದೇ ಕ್ರಮ ಕೈಗೊಂಡಲ್ಲಿ. ಪುನಃ ಅದನ್ನು

ಎಲ್ಲಿ ಪ್ರಶ್ನಿಸುವುದಕ್ಕೆ ಅವಕಾಶವಾಗುತ್ತದೆಂಬ ಉದ್ದೇಶದಿಂದ, ನಾಳೆ ಸದನ ಪ್ರಾರಂಭವಾಗುವ ಪೂರ್ವದಲ್ಲೇ ವರದಿಯನ್ನು ತರಿಸಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಕ್ರಮ ಕೈಗೊಳ್ಳುವುದರಲ್ಲಿ ಎರಡು ಮಾತಿಲ್ಲ.

(ಗೊಂದಲ)

ಅಧ್ಯಕ್ಷರು : ನಾಳೆ ಬೆಳಿಗ್ಗೆ ವರದಿ ತಂದು ಪ್ರಶ್ನೋತ್ತರ ಆದ ಕೂಡಲೇ ಮಾಹಿತಿ ಕೊಡಬೇಕು.

(ಈ ಹಂತದಲ್ಲಿ ಧರಣಿ ನಿಂತ ಸದಸ್ಯರೆಲ್ಲರೂ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಅಧ್ಯಕ್ಷರು : ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಈಗಾಗಲೇ ಚರ್ಚೆ ಮುಗಿದಿದೆ. ಮಾನ್ಯ ಸದಸ್ಯರೆಲ್ಲರೂ ಮಾತನಾಡಬೇಕೆಂದು ಹೇಳುತ್ತಾರೆ. ಮಾನ್ಯ ಶ್ರೀರಾಮುಲು ಅವರು ಮಾತನಾಡಿ. ಸದಸ್ಯರೆಲ್ಲರೂ 10 ನಿಮಿಷಗಳ ಕಾಲಾವಧಿ ಮಾತ್ರ ತೆಗೆದುಕೊಳ್ಳಬೇಕು. ಸಹಕರಿಸಿ, ಗಮನ ಸೆಳೆಯುವುದನ್ನು ಆಮೇಲೆ ತೆಗೆದುಕೊಳ್ಳೋಣ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ವಿಷಯದ ಮೇಲೆ ಮುಂದುವರೆದ ಚರ್ಚೆ :

ವಿಷಯ : ರಾಜ್ಯದಲ್ಲಿ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಬಿ. ಶ್ರೀರಾಮುಲು (ಬಳ್ಳಾರಿ) : ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಅತ್ಯಂತ ಘೋರವಾದಂತಹ ಬರಗಾಲ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಸರ್ಕಾರವು ನಾಯಕತ್ವದ ಬದಲಾವಣೆಯ ಗೊಂದಲದಲ್ಲಿ ಮುಳುಗಿರುವಂತಹ ಸಂದರ್ಭದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಬರಗಾಲವೇನು ಬಂದಿತ್ತೋ, ಜನರು ಸಂಕಷ್ಟದಲ್ಲಿ ಏನಿದ್ದರೋ, ಅಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವಾಗಿರಬಹುದು, ಕೇಂದ್ರ ಸರ್ಕಾರವಾಗಿರಬಹುದು. ಬರ ಪರಿಹಾರ ಕೊಡುವ ವಿಷಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ತಮ್ಮ ಮೂಲಕ ಸದನಕ್ಕೆ ತಿಳಿಸಬಯಸುತ್ತೇನೆ. ಜನರು ಕಷ್ಟದಲ್ಲಿರುವಂತಹ ಸಂದರ್ಭದಲ್ಲಿ ಕೇಂದ್ರ